ಅರೆಪ್ರಜ್ಞಾವಸ್ಥೆಯಲ್ಲಿ ವೇಶ್ಯಾಲಯಗಳಲ್ಲಿ ತಡರಾತ್ರಿಯವರೆಗೆ ಬಿದ್ದಿರುತ್ತಿದ್ದ.

ಇಂಥ ತಳಮಳದ ವೇಳೆಯಲ್ಲಿ ಮತ್ತೊಂದು ಘಟನೆ ಘಟಿಸಿತು, ಇದರಿಂದಾಗಿ ಹರಿಲಾಲನ ಇಡೀ ಶರೀರಕ್ಕೆ ಬೆಂಕಿ ಹೊತ್ತಿದಂತಾಯಿತು. ಅವನ ಕಣ್ಣುಗಳೆದುರು ಅಂಧಕಾರ ಹಬ್ಬಿತು, ತಲೆ ಸಿಡಿಯುತ್ತಿರುವಂತೆ ಭಾಸವಾಯಿತು. ತುಟಿಗಳು ಕಚ್ಚಿಕೊಂಡವು. ಹೊರ ಬಂದಿದ್ದ ಮುಖದ ಮೂಳೆಗಳು ಕಂಪಿಸಿದವು. ಕಣ್ಣುಗಳು ಕೆಂಪಗಾದವು.

'ಆಲ್ ಇಂಡಿಯಾ ಸ್ಪೋಸ್ ಲಿಮಿಟೆಡ್' ಕಂಪನಿಯ ಶೇರುಗಳನ್ನು ಮುಸ್ಲಿಮ್ ಸ್ನೇಹಿತರು ಪೇಶಾವರ್‌ಗೆ ಹೋಗಿ ಮಾರಿದ್ದರು. ಅವರಲ್ಲಿ ಒಬ್ಬ ಶೇರು ಖರೀದುದಾರ ಕಂಪನಿಯ ವಿಳಾಸಕ್ಕೆ ಎರಡು ಮೂರು ಪತ್ರಗಳನ್ನು ಬರೆದಿದ್ದ. ಆದರೆ ಅವನಿಗೆ ಉತ್ತರ ಸಿಕ್ಕಿರಲಿಲ್ಲ. ನಂತರ ಅವನು ಮತ್ತೊಂದು ಪತ್ರವನ್ನು ರಿಜಿಸ್ಟರ್ಡ್ ಅಂಚೆಯಿಂದ ಕಳುಹಿಸಿದ, ಆದರೆ ಈ ನಡುವೆ ಕಂಪನಿಯ ಕಚೇರಿಯನ್ನು ಮನೆಯ ಮಾಲೀಕ ತನ್ನ ವಶಕ್ಕೆ ಪಡೆದಿದ್ದ. ಹೀಗಾಗಿ ಪತ್ರ ಅಂಚೆ ಕಚೇರಿಯ 'ಈ ಹೆಸರಿನ ಕಂಪನಿಯಿಲ್ಲ' ಎಂಬ ಟಿಪ್ಪಣಿಯೊಂದಿಗೆ ಅವನಿಗೆ ಮರಳಿ ಬಂದಿತ್ತು. ಆ ಟಿಪ್ಪಣಿಯನ್ನು ಆಧಾರವಾಗಿಟ್ಟುಕೊಂಡು ಅವನು ಮೋಸಗಾರಿಕೆಯ ದೂರನ್ನು ಸಲ್ಲಿಸಲು ಓರ್ವ ವಕೀಲರನ್ನು ಸಂಪರ್ಕಿಸಿದ. ವಕೀಲರು ಎಲ್ಲಾ ಕಾಗದಪತ್ರಗಳನ್ನು ನೋಡಿದರು, ಸಂಪೂರ್ಣ ವಿವರಣೆಯನ್ನು ತೆಗೆದುಕೊಂಡರು,. ನಂತರ ಕಂಪನಿಯ ಡೈರೆಕ್ಟರ್ ಹರಿಲಾಲ್ ಗಾಂಧಿಯ ಹೆಸರನ್ನು ನೋಡಿ ಆ ವ್ಯಕ್ತಿಯನ್ನು ಸಮಾಧಾನ ಮಾಡಿದರು.

'ನೋಡಿ, ಈ ಹರಿಲಾಲ ಮಹಾತ್ಮಾ ಗಾಂಧೀಜಿಯವರ ಮಗನಾಗಿದ್ದಾನೆ. ಇವನ ವಿರುದ್ಧ ಕಾನೂನು ಕ್ರಮಗಳನ್ನು ತೆಗೆದುಕೊಂಡರೆ ನಿಮಗೆ ಇಡೀ ದೇಶದಲ್ಲಿ ಕೆಟ್ಟ ಹೆಸರು ಬರುತ್ತದೆ. ಹೀಗಾಗಿ ನಾವು ಗಾಂಧೀಜಿಯವರಿಗೇ ಪತ್ರವನ್ನು ಬರೆದು ಅವರಿಂದಲೇ ನ್ಯಾಯವನ್ನು ಕೇಳೋಣ, ಇದೇ ಯೋಗ್ಯ ಮಾರ್ಗವಾಗಿದೆ'. ವಕೀಲರು ಅದಕ್ಕೆ ಸೂಕ್ತ ಚಿಕಿತ್ಸೆಯನ್ನು ಸಹ ಸೂಚಿಸಿದ್ದರು.

'ಆಲ್ ಇಂಡಿಯಾ ಸ್ಪೋರ್ಸ್ ಲಿಮಿಟೆಡ್'ನ ಇಡೀ ವೃತ್ತಾಂತ ಬಾಪೂ ಅವರಿಗೆ ತಲುಪಿತು. ಇದನ್ನೆಲ್ಲಾ ನೋಡಿ ಬಾಪೂ ಅವರು ಕ್ಷೋಭೆಗೊಳಗಾದರು. ಹರಿಲಾಲನ ಈ ಹೊಸ ಉದ್ಯಮ ಸಾರ್ವಜನಿಕ ಕಂಪನಿಯಾಗಿದ್ದು, ಪೇಶಾವರದ ಈ ಶೇರುದಾರನಂತೆ ಇನ್ನೂ ಅನೇಕರು ಸಹ ಈ ಕಂಪನಿಯಲ್ಲಿ ಹಣ ಹೂಡಿರಬೇಕು, ಅವರ ಹಣಕ್ಕೂ ಇದೇ ಗತಿಯಾಗಿರಬೇಕು ಎಂದು ಬಾಪೂ ಯೋಚಿಸಿದರು. ಹರಿಲಾಲನಿಂದಲೇ ಈ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಪಡೆಯಬೇಕೆಂಬ ಉದ್ದೇಶದಿಂದ ಬಾಪೂ ಅವರು ಕಲ್ಕತ್ತಾದಲ್ಲಿ ಇದರ ಬಗ್ಗೆ ವಿಚಾರಣೆ ಮಾಡಿಸಿದರು. ಬಾ ಮತ್ತು ಹರಿಲಾಲರ ಮಕ್ಕಳನ್ನು ಕೆಲವು ದಿನ ಹರಿಲಾಲನ ಬಳಿ ಕಲ್ಕತ್ತಾಕ್ಕೆ ಕಳುಹಿಸುವುದು, ಇದರಿಂದ ಹರಿಲಾಲನ ಪರಿಸ್ಥಿತಿ ತಿಳಿಯುವುದು, ಸಾಧ್ಯವಾದರೆ ಸುಧಾರಣೆ ಕ್ರಮವನ್ನು ತೆಗೆದುಕೊಳ್ಳಬಹುದು ಎಂದೂ ಬಾಪೂ ಯೋಚಿಸಿದರು.

ಆದರೆ ಕಲ್ಕತ್ತಾದಿಂದ ಬಂದ ಸುದ್ದಿ ಮತ್ತೂ ಆಘಾತಕಾರಿಯಾಗಿತ್ತು. ಹರಿಲಾಲ ತನ್ನ ವಾಸಸ್ಥಾನವನ್ನು ತ್ಯಜಿಸಿದ್ದ, ಆಗ ಅವನು ಸ್ನೇಹಿತನೊಬ್ಬನ ಮನೆಯಲ್ಲಿ ವಾಸಿಸುತ್ತಿದ್ದ. ಪತ್ರ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಿಕ್ಕಿದ ವಿಳಾಸ, ಒಂದು ಕಚೇರಿಯ ಮೂಲಕ ಬಂದಿತ್ತು. ಈಗ ಹರಿಲಾಲನ ಬಳಿ ಅವನದೇ ಆದ ಯಾವ ವಿಳಾಸವೂ ಇರಲಿಲ್ಲ.

## ಇಪ್ಪತ್ತೇಳು

ದೇಶದೆಲ್ಲೆಡೆ ಪ್ರಚಂಡ ಅಲೆಯಂತೆ ವ್ಯಾಪಿಸುತ್ತಿದ್ದ ಅಸಹಕಾರ ಆಂದೋಳನದ ಅಂತ್ಯ ಚೌರಿ ಚೌರಾದ ಅನಪೇಕ್ಷಿತ ಮತ್ತು ಭಯಾನಕ ಹತ್ಯಾಕಾಂಡದಲ್ಲಾಗಿತ್ತು. ಅಸಹಕಾರದ ಅಹಿಂಸಾತ್ಮಕ ಹೋರಾಟಕ್ಕೆ ಈ ಹತ್ಯಾಕಾಂಡ ಕಲ್ಪನೆಗೂ ಮೀರಿತ್ತು. ಸ್ವತಃ ಬಾಪೂ ಅವರೇ ಈ ಹತ್ಯಾಕಾಂಡದಿಂದಾಗಿ ವಿಚಲಿತರಾಗಿದ್ದರು. ಕಾಂಗ್ರೆಸ್‌ನ ಸಂಚಾಲಕರಾದ ಮುಖಂಡರು ಸಹ ಎರಡು ಪ್ರತ್ಯೇಕ ಗುಂಪುಗಳಲ್ಲಿ ಹಂಚಿ ಹೋಗಿದ್ದರು. ಮೃದು ದಳ ಮತ್ತು ಕಠಿಣ ದಳ ಈ ಎರಡು ದಳಗಳ ನಡುವೆ ಭಿನ್ನಾಭಿಪ್ರಾಯದ ಕಂದರ ಆಳವಾಗುತ್ತಿತ್ತು. ಈಗಲೂ ದೇಶ ಒಂದಾಗಿ ಆಂದೋಳನಕ್ಕೆ ಸಿದ್ಧವಾಗಿರಲು ಸಾಧ್ಯವಾಗಿರಲಿಲ್ಲ; ಅಹಿಂಸಾತ್ಮಕ ಆಂದೋಲನ ಮತ್ತು ಸತ್ಯಾಗ್ರಹದ ನೇತೃತ್ವವನ್ನು ವಹಿಸಲು ಅವರಿನ್ನೂ ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ ಎಂಬ ಭಾವನೆಯಿಂದ ಬಾಪೂ ಅವರು ಅಸಹಕಾರ ಆಂದೋಳನವನ್ನು ಹಿಂದಕ್ಕೆಳೆದರು. ಜೈಲುವಾಸ, ಲಾಠಿಚಾರ್ಜ್, ಗೋಲಿಬಾರ್, ಜಪ್ತಿ ಮತ್ತು ಶಾಲಾಕಾಲೇಜುಗಳು ಹಾಗೂ ಸರ್ಕಾರಿ ನೌಕರಿಗಳನ್ನು ತ್ಯಜಿಸಿ ರಾತ್ರೋರಾತ್ರಿ ಬೀದಿಗಿಳಿಯುವ ಲಕ್ಷಾಂತರ ಜನರಿಗೆ ಹೋರಾಟದ ಈ ಅನಪೇಕ್ಷಿತ ಅಂತ್ಯ, ಅವರಲ್ಲಿ ಶೂನ್ಯವನ್ನು ತುಂಬಿತ್ತು.

ಇಂಥ ಪರಿಸ್ಥಿತಿಯಲ್ಲಿ ಬಾಪೂ ಅವರ ಬಳಿಗೆ ಪೇಶಾವರ್‌ನ ವಕೀಲರ ಮೂಲಕ ಹರಿಲಾಲನ ಹೊಸ ಷಡ್ಯಂತ್ರದ ಸುದ್ದಿ ಬಂತು. ಬಾಪೂ ಅವರ ವ್ಯಥೆಗೆ ಕೊನೆಯೇ ಇರಲಿಲ್ಲ, ಹರಿಲಾಲ ಪರಿವಾರವನ್ನು ತ್ಯಜಿಸಿದ್ದಾನೆ, ಅವನ ಬಳಿ ವಾಸಿಸಲು ಮನೆ ಸಹ ಉಳಿದಿಲ್ಲ ಎಂಬ ಸುದ್ದಿ ಅವರಿಗೆ ತೀವ್ರ ಆಘಾತವನ್ನುಂಟು ಮಾಡಿತ್ತು. ಬಾ ಅವರಿಂದ ಈ ಆಘಾತವನ್ನು ತಡೆದುಕೊಳ್ಳಲಾಗಲಿಲ್ಲ. ಬಾ ಅವರ ಬಾಯಿಯಿಂದ ಮಾತೇ ಹೊರಡಲಿಲ್ಲ, ಆದರೆ ಅವರ ಮುಖದಲ್ಲಿನ ಭಾವನೆ ಅವರ ಮನಸ್ಸಿನ ವೇದನೆಯ ಕಥೆಯನ್ನು ಹೇಳುತ್ತಿತ್ತು. ಒಂದು ವೇಳೆ ಹರಿಲಾಲನ ಮಕ್ಕಳು ಆಶ್ರಮಕ್ಕೆ ಬಂದು ಬಾ ಅವರ ಬಳಿ ಇದ್ದಿದ್ದರೆ, ಬಾ ಅವರಿಗೆ ತುಂಬಾ ಸಂತಸವಾಗುತ್ತಿತ್ತು.

ಹರಿಲಾಲನಿಗೆ ಕೊಡಲಾಗದಿದ್ದ ಪ್ರೀತಿಯನ್ನು ಅವನ ಮಕ್ಕಳ ಪಾಲನೆಪೋಷಣೆಯನ್ನು ಮಾಡಿ ಬಾ ಅವರಿಗೆ ಸಮಾಧಾನವಾಗುತ್ತಿತ್ತು. 'ನೀನು ಹರಿಲಾಲನ ಬಗ್ಗೆ ಅಗತ್ಯಕ್ಕಿಂತ ಹೆಚ್ಚು ಚಿಂತೆಯನ್ನು ಮಾಡುತ್ತೀಯ' ಒಮ್ಮೆ ಬಾಪೂ ಅವರು ಸಹಜವಾಗಿ ಬಾ ಅವರಿಗೆ ಹೇಳಿದ್ದರು. ಒಂದೇ ಸಮನೆ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರಿಂದಾಗಿ ಬಾ ಅವರ ಶರೀರ ಸೊರಗಿತ್ತು. ಗೋಡೆಗೊರಗಿ ಕೂತ ಬಾಪೂ ಚರಕದಿಂದ ನೂಲು ತೆಗೆಯುತ್ತಿದ್ದರು. ಅವರ ಸಮೀಪದಲ್ಲಿ ಕೂತಿದ್ದ ಮಹಾದೇವ ದೇಸಾಯಿಯವರು ಏನೋ ಬರೆಯುತ್ತಿದ್ದರು.

'ನಾನು ಹರಿಲಾಲನಿಗೆ ಜನ್ಮ ನೀಡಿದ್ದೇನೆ. ನಾನು ಅವನ ತಾಯಿ. ಹರಿಲಾಲನ ಬಗ್ಗೆ ನನಗಿರುವಷ್ಟು ಚಿಂತೆ ಇನ್ಯಾರಿಗಿರಲು ಸಾಧ್ಯ?' ಬಾ ಅವರು ಒತ್ತಿ ಬಂದ ದುಃಖದಿಂದ ಹೇಳಿದರು, 'ಪಾಪ, ಈಗ ಅವನೇನು ಊಟ ಮಾಡುವನೋ? ಎಲ್ಲಿರುವನೋ? ನಮಗೆ ಈ ಬಗ್ಗೆ ವಿಷಯವೇ ತಿಳಿದಿಲ್ಲ. ಅವನು ಪತ್ರವನ್ನು ಬರೆಯದೇ ಎಷ್ಟೋ ಸಮಯವಾಯಿತು.'

'ಅವನು ಪತ್ರ ಬರೆಯದಿದ್ದದ್ದು ಅರ್ಥವಾಗುತ್ತದೆ, ಆದರೆ ಅವನ ಆ ಸಾರಾಯಿ ಸೇವನೆಯನ್ನು ದೇವರೇ ಬಿಡಿಸಬೇಕು' ಬಾಪೂ ಅವರು ತಕಲಿಯ ಹಿಂಜಿದ ಹತ್ತಿಯನ್ನು ಬದಲಾಯಿಸುತ್ತಾ ಹೇಳಿದರು.

'ದೇವರ ಮೇಲೆ ನನಗೆ ನಂಬಿಕೆಯಿದೆ' ಬಾ ಹೇಳಿದರು, 'ಆದರೆ ನಮ್ಮದು ವೈಷ್ಣವ ಧರ್ಮ, ಆದರೂ ಅವನು ಹೇಗೆ ಬದಲಾದ...'

'ಹರಿಲಾಲ ಇಂದೇನು ಅನುಭವಿಸುತ್ತಿದ್ದಾನೋ, ಅದಕ್ಕೆ ನಾವೂ ಸಹ ಉತ್ತರಿಸಬೇಕಾಗುತ್ತದೆ' ಬಾಪೂ ಸಹಜವಾಗಿಯೇ ಹೇಳಿದರು.

'ಹರಿಲಾಲನ ಜನ್ಮದ ವೇಳೆಯಲ್ಲಿ ನಾನೆಷ್ಟು ಕಾಮುಕನಾಗಿದ್ದೆ ಎಂಬುದನ್ನು ನೆನಪು ಮಾಡಿಕೋ, ನನ್ನ ಈ ಕಾಮುಕತೆಯಲ್ಲಿ ನೀನೂ ಸಹ ಪಾಲುದಾರಳಾಗಿದ್ದೆ. ಅದಕ್ಕಾಗಿ ನೀನೂ ಸಹ ಸಮಾನ ಹೊಣೆಗಾರಳಾಗಿದ್ದೀಯ. ಹೀಗಿರುವಾಗ ನಾವೇಕೆ ಹರಿಲಾಲನನ್ನು ದೋಷಿ ಎಂದು ಪರಿಗಣಿಸಬೇಕು?'

ಮಹಾದೇವ ದೇಸಾಯಿಯವರ ಲೇಖನಿ ಇದ್ದಕ್ಕಿದ್ದಂತೆ ನಿಂತಿತು. ಅವರು ಬಾಪೂ ಅವರನ್ನು ನೋಡಿದರು. ಆದರೆ ಬಾಪೂ ಅವರ ಗಮನ ತಕಲಿಗೆ ಹಿಡಿದಿದ್ದ ನೂಲಿನ ಮೇಲಿತ್ತು. ಬಾ ಅವರ ಕಣ್ಣುಗಳು ತೇವವಾಗಿದ್ದವು. ಅವರು ತಲೆತಗ್ಗಿಸಿ ನೆಲವನ್ನು ನೋಡಿದರು.

'ಹರಿಲಾಲ ತನ್ನಿಡೀ ಜೀವನವನ್ನು ನಾಶ ಮಾಡಿಕೊಂಡ' ಬಾಪೂ ಅವರು ಅಷ್ಟೇ ಧೈರ್ಯದಿಂದ, ಸಹಜವಾಗಿ ಹೇಳಿದರು, 'ನಾನು ನನ್ನೆಲ್ಲಾ ದೋಷಗಳನ್ನು ಅವನಲ್ಲಿ, ಆಕೃತಿಯನ್ನು ದೊಡ್ಡದು ಮಾಡಿ ತೋರಿಸುವ ಲೆನ್ಸ್‌ನಲ್ಲಿ ಪ್ರತಿಬಿಂಬಗೊಳ್ಳುವುದನ್ನು ನೋಡುತ್ತಿದ್ದೇನೆ'. ನಂತರ ಬಾಪೂ ಅವರು ಮಹಾದೇವ ದೇಸಾಯಿಯವರನ್ನು ನೋಡುತ್ತಾ ಮೆಲ್ಲನೆ ಹೇಳಿದರು, 'ಹರಿಲಾಲನ ವರ್ತನೆ ಸರಿಯಾಗಿಯೇ ಇದೆ... ಒಂದು ವೇಳೆ ನನಗೆ ಬೇರೆ ಮಕ್ಕಳಿಲ್ಲದಿದ್ದರೆ ನಾನು ಬಹುಶಃ ರೋದಿಸಿ ಇಹಲೋಕವನ್ನು ತ್ಯಜಿಸುತ್ತಿದ್ದೆ...'

**(ಸಶೇಷ)**